**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಮ್. ಎಫ್.ಸಿ ನ್ಯಾಯಾಲಯ**

**ತಿ. ನರಸಿಪುರ**

**ಸಿಸಿ ಸಂಖ್ಯೆ: 148/2016**

| | | |
|---|---|---|
| ಸಾಕ್ಷಿದಾರರ ಹೆಸರು: | ಬಿ.ಎನ್ ಮನೋಹರ್ | ಪ್ರಮಾಣ ವಚನ ಬೋದಿಸಲಾದ |
| ತಂದೆಯ ಹೆಸರು: | ನಂಜುಂಡೇಗೌಡ | ದಿನಾಂಕ: 19.12.2024 |
| ವಯಸ್ಸು | 42 ವರ್ಷ | |
| ವೃತ್ತಿ | ಭೂಮಾಪಕರು | ಸಿ.ಡಬ್ಲೂ: 1 |
| ವಾಸ: | ತಿ. ನರಸೀಪುರ | |

**ಮುಖ್ಯ ವಿಚಾರಣೆ: ನ್ಯಾಯಾಲಯದ ಪರವಾಗಿ ಸ್ವಯಂ ಸಾಕ್ಷಿದಾರರಿಂದ:**

1. ಈ ನ್ಯಾಯಾಲಯದ ಆದೇಶದ ಮೇರೆಗೆ ನಾನು ನ್ಯಾಯಾಲಯದ ಆಯುಕ್ತನಾಗಿ ನೇಮಕಗೊಂಡಿರುತ್ತೇನೆ. ನ್ಯಾಯಾಲಯದ ಆದೇಶದಂತೆ ದಿನಾಂಕ 28.02.2023 ರಂದು ಉಭಯ ಪಕ್ಷಗಾರರಿಗೆ ನೋಟಿಸ್ ನ್ನು ಜಾರಿ ಮಾಡಿರುತ್ತೇನೆ. ನಂತರ ದಿನಾಂಕ 08.03.2023 ರಂದು ಹೊರಳಹಳ್ಳಿ ಗ್ರಾಮದ ಸರ್ವೇ ನಂ.243/2 ಎ 2 ಬಿ ಜಮೀನಿಗೆ ಭೇಟಿ ನೀಡಿ ಸರ್ವೇ ದಾಖಲೆಗಳ ಆಧಾರದ ಮೇಲೆ ಅಳತೆ ಮಾಡಿ ನಕ್ಷೆಯನ್ನು ತಯಾರಿಸಿ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಅಳತೆ ಮಾಡುವ ಸಂದರ್ಭದಲ್ಲಿ ವಾದಿ ಮತ್ತು ಪ್ರತಿವಾದಿಗಳು ಸ್ಥಳದಲ್ಲಿ ಹಾಜರಿದ್ದರು.

2. ಸಾಕ್ಷಿದಾರರು ಅಳತೆ ಬಾಬ್ತು ನಕ್ಷೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಸಿ-1** ಎಂದು, ವಾದಿಗಳ ಪರ ವಕೀಲರ ಸೂಚನಾ ಪತ್ರಕ್ಕೆ ಉತ್ತರವನ್ನು **ನಿಸಿ-2** ಎಂದು, ಪ್ರತಿವಾದಿಗಳ ಪರ ವಕೀಲರ ಸೂಚನಾ ಪತ್ರಕ್ಕೆ ಉತ್ತರವನ್ನು **ನಿಸಿ-3** ಎಂದು, ಅಂಚೆ ರಸೀದಿಗಳನ್ನು **ನಿಸಿ-4** ಎಂದು, ಸಾಕ್ಷಿದಾರರು ಪಂಚನಾಮೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಸಿ-5** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ.ಡಿ ವಕೀಲರವರಿಂದಃ**

ನ್ಯಾಯಾಲಯದಿಂದ ತಾಲ್ಲೂಕು ಭೂಮಾಪಕರನ್ನು ನ್ಯಾಯಾಲಯದ ಆಯುಕ್ತರನ್ನಾಗಿ ನೇಮಕ ಮಾಡಲಾಗಿದೆ ಎಂದರೆ ಸರಿ. ನಮ್ಮ ಇಲಾಖೆಯಲ್ಲಿ ತಾಲ್ಲೂಕು ಭೂಮಾಪಕರು ಮತ್ತು ಭೂಮಾಪಕರು ಎಂಬ ಎರಡು ವಿಧಧ ಅಧಿಕಾರಿಗಳು ಇದ್ದಾರೆ ಎಂದರೆ ಸರಿ. ನಮ್ಮ ತಿ.ನರಸೀಪುರದಲ್ಲಿ ಇಬ್ಬರು ಭೂಮಾಪಕರು ಇರುತ್ತೇವೆ. ನಾನು ತಾಲ್ಲೂಕು ಭೂಮಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ನಿಸಿ-1 ರಿಂದ 5 ರ ದಾಖಲಾತಿಗಳಲ್ಲಿ ಭೂಮಾಪಕರು ಎಂದು ಮೊಹರು ಹಾಕಿದ್ದೇನೆ ಎಂದರೆ ಸರಿ. ನ್ಯಾಯಾಲಯದ ಆದೇಶದ ಮೇರೆಗೆ ಭೂ ದಾಖಲೆಗಳ ಸಹಾಯಕ ಅಧಿಕಾರಿಗಳು ನನ್ನನ್ನು ಈ ದಾವೆಯಲ್ಲಿ ಸರ್ವೇ ಕಾರ್ಯ ಕೈಗೊಂಡು ನ್ಯಾಯಾಲಯಕ್ಕೆ ವರದಿ ನೀಡುವಂತೆ ನೇಮಕ ಮಾಡಿರುತ್ತಾರೆ. ಭೂ ದಾಖಲೆಗಳ ಸಹಾಯಕ ಅಧಿಕಾರಿಗಳು ನನ್ನನ್ನು ನ್ಯಾಯಾಲಯದಿಂದ ಆದೇಶ ಪಡೆದುಕೊಂಡು ನೇಮಕ ಮಾಡಿರುವುದಿಲ್ಲ. ನಾನು ಭೂ ದಾಖಲೆಗಳ ಸಹಾಯಕ ಅಧಿಕಾರಿಗಳಿಂದ ನ್ಯಾಯಾಲಯದಿಂದ ಬಂದ ವಾರೆಂಟ್ ನಕಲನ್ನು, ಸೂಚನಾ ಪತ್ರಗಳನ್ನು, ವಾದಪತ್ರವನ್ನು ಮತ್ತು ನ್ಯಾಯಾಲಯದ ಆದೇಶದ ಪ್ರತಿಯನ್ನು ಪಡೆದುಕೊಂಡು ಅಳತೆ ಮಾಡಿರುತ್ತೇನೆ. ಸದರಿ ದಾಖಲೆಗಳನ್ನು ಸ್ವೀಕರಿಸಿದ ನಂತರ ನಾನು ನ್ಯಾಯಾಲಯಕ್ಕೆ ಭೇಟಿ ನೀಡಿ ಈ ದಾವೆಯ ಕಡತವನ್ನು ಪರಿಶೀಲಿಸಿರುವುದಿಲ್ಲ. ಈ ದಾವೆಯಲ್ಲಿ ಪ್ರತಿವಾದಿಗಳು ಸಲ್ಲಿಸಿದ್ದ ಸೂಚನಾಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಪ್ರತಿವಾದಿಗಳು ಸಲ್ಲಿಸಿದ್ದ ಸೂಚನಾ ಪತ್ರದ 2 ನೇ ಖಂಡಿಕೆಯಲ್ಲಿ ನಮೂದಿಸಿರುವಂತೆ ನ್ಯಾಯಾಲಯದ ಕಡತವನ್ನು ಮತ್ತು ದಾಖಲಾತಿಗಳನ್ನು ಪರಿಶೀಲಿಸಿರುವುದಿಲ್ಲ. ಈ ದಾವೆಯ ವಾದಪತ್ರ, ನ್ಯಾಯಾಲಯದಿಂದ ಬಂದಿದ್ದ ದಾಖಲಾತಿಗಳು ಮತ್ತು ನಮ್ಮ ಇಲಾಖೆಯಲ್ಲಿರುವ ಸರ್ವೇ ದಾಖಲಾತಿಗಳ ಆಧಾರದ ಮೇರೆಗೆ ನಾನು ಸ್ಥಳಕ್ಕೆ ಹೋಗಿ ಅಳತೆ ಮಾಡಿರುತ್ತೇನೆ. ನಮ್ಮ ಇಲಾಖೆಯಲ್ಲಿರುವ ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಮೂಲಟಿಪ್ಪಣಿ, ಹಿಸ್ಸಾಟಿಪ್ಪಣಿ, ಆಕಾರಬಂದ್, ಅಟ್ಲಾಸ್ ಮತ್ತು ಗ್ರಾಮ ನಕಾಶೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ದಾಖಲಾತಿಗಳ ನಕಲುಗಳನ್ನು ನನ್ನ ವರದಿಯ ಜೊತೆಗೆ

ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ನಾನು ಹೇಳಿದಂತೆ ಸದರಿ ಮೇಲ್ಕಂಡಂತೆ ನಮೂದಿಸಿದ ದಾಖಲಾತಿಗಳನ್ನು ನಾನು ನಮ್ಮ ಇಲಾಖೆಯಿಂದ ಪಡೆದುಕೊಂಡಿಲ್ಲ ಮತ್ತು ಸದರಿ ದಾಖಲಾತಿಗಳ ಆಧಾರದ ಮೇಲೆ ಯಾವುದೇ ಅಳತೆ ಕಾರ್ಯ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸಲ್ಲಿಸಿರುವ ಸೂಚನಾ ಪತ್ರದ 3 ನೇ ಖಂಡಿಕೆಯಲ್ಲಿ ನಮೂದಾಗಿರುವ ದಿನಾಂಕ 01.09.1988 ರ ಕ್ರಯಪತ್ರವನ್ನು ನಾನು ಪಡೆದುಕೊಂಡು ನೋಡಿರುವುದಿಲ್ಲ.

ಸರ್ವೇ ನಂ.243/2 ಎ 2 ಬಿ ಜಮೀನು ಖಾಲಿ ಜಾಗ ಎಂದು ನನ್ನ ವರದಿಯಲ್ಲಿ ನಮೂದಿಸಿರಲಿಲ್ಲ. ಸದರಿ ಸರ್ವೇ ನಂ.243/2 ಎ 2 ಬಿ ಜಮೀನಿನ ಸುತ್ತಮುತ್ತಲು ಮನೆಗಳು ಇವೆ ಎಂದರೆ ಸರಿ. ಸದರಿ ಸರ್ವೇ ನಂ.243 ರ ಮೂಲ ಪೂರ್ತಿ ಜಮೀನನ್ನು ನಾನು ಅಳತೆ ಮಾಡಿರುವುದಿಲ್ಲ. ಸರ್ವೇ ನಂ.243/2 ಎ 2 ಬಿ ಜಮೀನಿನ ಪೂರ್ವಕ್ಕೆ ಸರ್ವೇ ನಂ.243/2 ಸಿಯಲ್ಲಿ ಪ್ರತಿವಾದಿಗಳಿಗೆ 4 ಗುಂಟೆ ಜಮೀನು ಇರುತ್ತದೆ. ಸದರಿ ಸರ್ವೇ ನಂ.243/2 ಸಿ ನಲ್ಲಿ 1 ನೇ ಪ್ರತಿವಾದಿಯು ಮನೆ ನಿರ್ಮಿಸಿದ್ದಾರೆ ಎಂದರೆ ಸರಿ. ಸದರಿ 1 ನೇ ಪ್ರತಿವಾದಿಯ ಮನೆಯನ್ನು ನಾನು ನಿಸಿ-1 ರ ನಕ್ಷೆಯಲ್ಲಿ ನಮೂದಿಸಿರುವುದಿಲ್ಲ. ಸದರಿ 1 ನೇ ಪ್ರತಿವಾದಿಯ ಮನೆಯನ್ನು ನಿಸಿ-1 ರ ನಕ್ಷೆಯಲ್ಲಿ ನಮೂದಿಸಲು ನನಗೆ ತೊಂದರೆ ಇರಲಿಲ್ಲ. ನಾನು ಸ್ಥಳಕ್ಕೆ ಭೇಟಿ ನೀಡಿ ಅಳತೆ ಮಾಡಿದ್ದಾಗ ದಾವಾ ಅನುಸೂಚಿ ಸ್ವತ್ತಿಗೆ, ಪ್ರತಿವಾದಿಗಳ 4 ಗುಂಟೆ ಜಮೀನಿಗೆ ಸ್ಥಳದಲ್ಲಿ ಹದ್ದುಬಸ್ತು ಕಲ್ಲುಗಳು ಇರಲಿಲ್ಲ. ಸಾಕ್ಷಿದಾರರು ಮುಂದುವರೆದು ನಾನು ಅಳತೆ ಮಾಡಿ ಸದರಿ ಆಸ್ತಿಗಳಿಗೆ ಹದ್ದುಬಸ್ತನ್ನು ಗುರುತಿಸಿಕೊಂಡು ಅಳತೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಸಿ-1 ರ ನಕ್ಷೆಯಲ್ಲಿ ಪ್ರತಿವಾದಿಗಳು ಒತ್ತುವರಿ ಮಾಡಿದ್ದಾರೆ ಎಂದು ತೋರಿಸಲಾದ ಹಳದಿ ಬಣ್ಣದ ½ ಗುಂಟೆ ಜಮೀನಿನಲ್ಲಿ ಪ್ರತಿವಾದಿಗಳಿಗೆ ಸೇರಿದ ಶೀಟಿನ ಮನೆ ಇರುತ್ತದೆ. ಸದರಿ ಶೀಟಿನ ಮನೆ ಸದರಿ ಒತ್ತುವರಿ ಜಾಗದಲ್ಲಿರುವ ಬಗ್ಗೆ ನನ್ನ ವರದಿಯಲ್ಲಿ ನಮೂದಿಸಿರುವುದಿಲ್ಲ. ಪ್ರತಿವಾದಿಗಳು ವಾದಿಗಳ ಜಾಗದಲ್ಲಿ ಎಷ್ಟು ಅಡಿ ಅಗಲ ಮತ್ತು ಎಷ್ಟು ಅಡಿ ಉದ್ದದಲ್ಲಿ ಮನೆಯನ್ನು ನಿರ್ಮಿಸಿದ್ದಾರೆ ಎಂದು ಅಳತೆ ಮಾಡಿ ಅದನ್ನು ನನ್ನ ವರದಿಯಲ್ಲಿ ನಮೂದಿಸಿರುವುದಿಲ್ಲ. ಪ್ರತಿವಾದಿಗಳು ವಾದಿಯ

ಜಮೀನನ್ನು ಒತ್ತುವರಿ ಮಾಡದೇ ಇರುವುದರಿಂದ ನಾನು ನನ್ನ ವರದಿಯಲ್ಲಿ ಪ್ರತಿವಾದಿಗಳು ಯಾವ ರೀತಿ ಒತ್ತುವರಿ ಮಾಡಿದ್ದಾರೆ ಮತ್ತು ಸದರಿ ಜಾಗದಲ್ಲಿ ಯಾವ ರೀತಿಯ ಕಟ್ಟಡ ಅಥವಾ ನಿವೇಶನ ಮಾಡಿಕೊಂಡಿದ್ದಾರೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಪ್ರತಿವಾದಿಗಳು ಸಲ್ಲಿಸಿರುವ ಕಚ್ಚಾ ನಕಾಶೆಯನ್ನು ಪರಿಶೀಲಿಸಿ ನೋಡಿರುವುದಿಲ್ಲ. ಹೊರಳಹಳ್ಳಿ ಗ್ರಾಮ ದೊಡ್ಡೆಬಾಗಿಲು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ದೊಡ್ಡೆಬಾಗಿಲು ಗ್ರಾಮ ಪಂಚಾಯತಿಯ ಪಿ.ಡಿ.ಓರವರ ಸಹಾಯ ಪಡೆದು ದಾವಾ ಅನುಸೂಚಿ ಸ್ವತ್ತನ್ನು ಅಳತೆ ಮಾಡಿರುವುದಿಲ್ಲ. ನಾನು ದಾವಾ ಅನುಸೂಚಿ ಸ್ವತ್ತಿಗೆ ಭೇಟಿ ನೀಡಿ ಸ್ಥಳದಲ್ಲಿ ಅಳತೆ ಕಾರ್ಯ ಕೈಗೊಂಡು ಕಛೇರಿಗೆ ವಾಪಸ್ಸಾಗಿ ಕಛೇರಿಯಲ್ಲಿ ನಿಸಿ-1 ರ ನಕ್ಷೆಯನ್ನು ತಯಾರಿಸಿರುತ್ತೇನೆ. ನಾನು ಸ್ಥಳದಲ್ಲಿ ಅಳತೆ ಮಾಡುವಾಗ ಕಚ್ಚಾ ನಕಾಶೆಯನ್ನು ತಯಾರಿಸಿಕೊಂಡಿರುತ್ತೇನೆ. ಸದರಿ ಕಚ್ಚಾ ನಕಾಶೆಯನ್ನು ನನ್ನ ವರದಿಯ ಜೊತೆಗೆ ಹಾಜರುಪಡಿಸಿರುವುದಿಲ್ಲ. ನ್ಯಾಯಾಲಯವು ನನ್ನನ್ನು ನ್ಯಾಯಾಲಯದ ಆಯುಕ್ತರನ್ನಾಗಿ ನೇಮಕ ಮಾಡಿರುವ ಉದ್ದೇಶವನ್ನೇ ನಾನು ಮರೆತಿದಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ, ಯಾವುದೇ ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ವಾದಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂಧಿಯನ್ನು ನೋಡಿಕೊಂಡು ನಾನು ಸುಳ್ಳು ವರದಿಯನ್ನು ನ್ಯಾಯಾಲಯದಲ್ಲಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

(ಮರು ವಿಚಾರಣೆಃ ಇಲ್ಲ.)

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿರುತ್ತೇನೆ.)

ಓ.ಹೇ.ಕೇ.ಸ. ಇದೆ.,

ಹೆಚ್ಚುವರಿ ಸಿ.ಜೆ ಮತ್ತು ಜೆ.ಎಮ್.ಎಫ್.ಸಿ
ನ್ಯಾಯಾಲಯ, ತಿ. ನರಸಿಪುರ